# ಹಸಿವಿನ ವೇದನೆ

**ಮಂಜುನಾಥ ಎಂ.ಎಂ.**

ಸಹ ಪ್ರಾಧ್ಯಾಪಕ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಪೂಜಿನಗರ, ಶಿವಮೊಗ್ಗ.

## ABSTRACT:

ಆರ್ಥಿಕ ಶೋಷಣೆ, ನಿರುದ್ಯೋಗ, ಭ್ರಷ್ಟಾಚಾರ, ಬೆಲೆ ಏರಿಕೆ ಮುಂತಾದ ಅಂಶಗಳು ಬಡವರ ಹಸಿವಿನ ಉಲ್ಬಣಕ್ಕೆ ಕಾರಣವಾಗಿವೆ. ಆಹಾರ ಉತ್ಪಾದನೆಯ ಏರಿಕೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಜನಸಂಖ್ಯೆ ಏರುತ್ತಾ ಹೋಗಿರುವುದರಿಂದ ಭೂಮಾಲಿಕರು ಮತ್ತು ಬಂಡವಾಳಶಾಹಿಗಳು ಕೂಲಿಕಾರರನ್ನು ಮತ್ತು ಕಾರ್ಮಿಕರನ್ನು ಶೋಷಣೆ ಮಾಡಿದ್ದರಿಂದಲೇ ಬಡತನ ಮತ್ತು ಹಸಿವಿನ ಪ್ರಮಾಣ ಹೆಚ್ಚಾಗಲು, ಬೇರೂರಲು ಕಾರಣವಾಯಿತು.

## KEYWORDS:

ಶೋಷಣೆ, ಮಾಲೀಕರು, ಹಸಿವು, ಜನಸಂಖ್ಯೆ, ಬೆಲೆ ಏರಿಕೆ.

ಸಮಾಜದಲ್ಲಿ ಹಲವು ವಿಧದ ಸಮಸ್ಯೆಗಳಿವೆ. ಹಸಿವು, ವಸ್ತ್ರ, ವಸತಿ, ಬಡತನ, ವಿಧವಾ, ದೇವದಾಸಿ, ಬಾಲ್ಯವಿವಾಹ, ಅನಕ್ಷರತೆ, ವರದಕ್ಷಿಣೆ, ವೃದ್ಧಾಪ್ಯ, ನಿರುದ್ಯೋಗ, ಜನಸಂಖ್ಯೆ, ಮುಂತಾದವು. ಈ ಎಲ್ಲ ಸಮಸ್ಯೆಗಳಲ್ಲಿ ಪ್ರಮುಖವಾದುದು ಹಸಿವಿನ ಸಮಸ್ಯೆ. ಹಸಿವು ಎಂದರೆ, ಅದರಲ್ಲಿ ಹಲವು ಬಗೆಗಳಿವೆ, ಅನ್ನದ ಹಸಿವು, ಕಾಮದ ಹಸಿವು, ಜ್ಞಾನದ ಹಸಿವು, ಅಧಿಕಾರದ ಹಸಿವು, ಸಂಪತ್ತಿನ ಹಸಿವು, ಪ್ರಚಾರದ ಹಸಿವು, ಸಾಧನೆಯ ಹಸಿವು, ಪ್ರಶಸ್ತಿ, ಸನ್ಮಾನದ ಹಸಿವು ಮುಂತಾದವು. ಆದರೆ ಇಲ್ಲಿ ಎಲ್ಲರನ್ನೂ ಕಾಡುವುದು ಪ್ರಧಾನವಾಗಿ ಅನ್ನದ ಹಸಿವು. ಅಂದರೆ, ಒಡಲಿನ ಹಸಿವು. ಮನುಷ್ಯನ ಸಕಲ ಚಟುವಟಿಕೆಗಳಿಗೆ ಕಾರಣ ಆತನ ಚೈತನ್ಯ. ದೇಹಕ್ಕೆ ಚೈತನ್ಯ ತುಂಬುವುದು ಅನ್ನ. ಅನ್ನಕ್ಕೆ ಆದ್ಯತೆ ನೀಡಿದರೆ ಉಳಿದ ಸಮಸ್ಯೆಗಳು ತನ್ನಿಂದ ತಾನೆ ನಿವಾರಣೆಯಾಗುತ್ತದೆ. ವಿಜ್ಞಾನ ತಂತ್ರಜ್ಞಾನದಲ್ಲಿ ಮುಂದುವರಿದಿದ್ದರೂ ದೇಶದ ದಾರಿದ್ರ್ಯಕ್ಕೆ ಇನ್ನೂ ಮುಕ್ತಿ ಸಿಕ್ಕಿಲ್ಲ. ಆರ್ಥಿಕ ಶೋಷಣೆ, ನಿರುದ್ಯೋಗ, ಭ್ರಷ್ಟಾಚಾರ, ಬೆಲೆ ಏರಿಕೆ ಮುಂತಾದ ಅಂಶಗಳು ಬಡವರ ಹಸಿವಿನ ಉಲ್ಬಣಕ್ಕೆ ಕಾರಣವಾಗಿವೆ. ಆಹಾರ ಉತ್ಪಾದನೆಯ ಏರಿಕೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಜನಸಂಖ್ಯೆ ಏರುತ್ತಾ ಹೋಗಿರುವುದರಿಂದ ಭೂಮಾಲಿಕರು ಮತ್ತು ಬಂಡವಾಳಶಾಹಿಗಳು ಕೂಲಿಕಾರರನ್ನು ಮತ್ತು ಕಾರ್ಮಿಕರನ್ನು ಶೋಷಣೆ ಮಾಡಿದ್ದರಿಂದಲೇ ಬಡತನ ಮತ್ತು ಹಸಿವಿನ

ಪ್ರಮಾಣ ಹೆಚ್ಚಾಗಲು, ಬೇರೂರಲು ಕಾರಣವಾಯಿತು. ಎಂಬ ಅರ್ಥಶಾಸ್ತ್ರಜ್ಞ ಟಿ. ಆರ್. ಮಾಲ್ಥಸ್ ಹೇಳಿದ್ದಾರೆ. ಹಸಿವು ಮತ್ತು ಬಡತನ ನಿವಾರಣೆಯಾಗಿದ ಹೊರತು ಯಾವ ದೇಶವೂ ಅಭಿವೃದ್ಧಿಯನ್ನು ಕಾಣಲು ಸಾಧ್ಯವಿಲ್ಲ. ಮೊದಲು ಹೊಟ್ಟೆಯ ಉದ್ಧಾರವಾಗಬೇಕು ಆನಂತರ ದೇಶದ ಉದ್ಧಾರ ಹಾಗೂ ಪ್ರಗತಿಯ ಮಾತು. ಈ ಎಲ್ಲ ಕಾರಣಗಳಿಂದ ಹಸಿವನ್ನು ನಿವಾರಿಸುವುದು ಮುಖ್ಯ ಎಂಬುದು ಇಂದಿನ ಮಹತ್ವ. ಕನ್ನಡದ ಆದ್ಯ ವಚನಕಾರ ಜೇಡರ ದಾಸಿಮಯ್ಯ ಅದಕ್ಕೆಂದೆ ಹೀಗೆ ಹೇಳಿದ್ದಾರೆ.

**ಒಡಲುಗೊಂಡವ ಹಸಿವ**
**ಒಡಲುಗೊಂಡವ ಹುಸಿವ**
**ಒಡಲುಗೊಂಡವನೆಂದು ನೀನೆನ್ನ ಜಡಿದು ನುಡಿಯದಿರಾ**
**ನೀನು ಎನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ.**

ಹಾಗೆಯೇ ಇನ್ನೊಂದು ವಚನದಲ್ಲಿ

**''ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದೆಡೆ ವಿಷವೇರಿತ್ತಯ್ಯ ಆಪಾದಮಸ್ತಕಕ್ಕೆ, ಹಸಿವಿಗನ್ನವನ್ನಿಕ್ಕಿ ವಿಷವನಿಳುಹಬಲ್ಲಡೆ ವಸುಧೆಯೊಳಗಾತನೆ ಗಾರುಡಿಗ ಕಾಣಾ ರಾಮನಾಥ''**

ಎಂದು ಹೇಳುವುದರ ಮೂಲಕ ಹಸಿವು ಎಂಬ ಹೆಬ್ಬಾವು ಒಡಲನ್ನು ಆವರಿಸುವುದರ ಮೂಲಕ ಪಾದದಿಂದ ಮಸ್ತಕದ ತನಕ ವಿಷವು ವ್ಯಾಪಿಸಿ ಬಿಡುತ್ತದೆ. ಆ ವಿಷ ಬೇರೆಯವರನ್ನೂ ಬಲಿ ಪಡೆಯದೆ ಬಿಡುವುದಿಲ್ಲ. ಆದ್ದರಿಂದ ಹಸಿವಿಗೆ ಅನ್ನವನ್ನು ಇಕ್ಕಿ ವಿಷವನ್ನು ನಿವಾರಿಸುವವನು ಮಾತ್ರ ಭೂಮಿಯಲ್ಲಿ ಮಾಂತ್ರಿಕನೆನಿಸಿಕೊಳ್ಳುತ್ತಾನೆ ಎಂದಿದ್ದಾನೆ. ಬಡವರ ಹಸಿವು ಮತ್ತು ಬಡತನವನ್ನು ಅಸ್ತ್ರವಾಗಿಟ್ಟುಕೊಂಡು ದಬ್ಬಾಳಿಕೆ ಮಾಡುವ, ಶೋಷಿಸುವ ಶೋಷಕರು ಅನ್ನದ. ಹಣದ ಆಸೆಯನ್ನು ತೋರಿಸುತ್ತಾರೆಯೇ ವಿನಃ ತಮ್ಮ ಕೆಲಸ ತೀರಿದ ಬಳಿಕ ತಾವು ನುಡಿದದ್ದನ್ನು ಮರೆತುಬಿಡುತ್ತಾರೆ. ಉಳ್ಳವರು ತಮ್ಮ ಸ್ವಾರ್ಥ, ಆಮಿಷಕ್ಕೆ ಬಡವರನ್ನು ದಾರುಣವಾಗಿ ದುಡಿಸಿಕೊಂಡರೆ ಹೊರತು ಅದಕ್ಕೆ ತಕ್ಕ ಪ್ರತಿಫಲವನ್ನು ನೀಡದೇ ಇದ್ದದ್ದು ನಿಜಕ್ಕೂ ಅಮಾನುಷವಾದುದು. ಅನ್ನದ ಮಹಿಮೆಯನ್ನು ಹಸಿದವರು ಮಾತ್ರ ಬಲ್ಲರು. ಆದರೆ ಅನ್ನದ ಮಹಿಮೆಯನ್ನು ಅರಿಯದ ಉಳ್ಳವರಿಗೆ ಹೆಚ್ಚು ಅನ್ನ ಆದರೆ ಅರಿತವರಿಗೆ ಅನ್ನವೇ ಸಿಗದಿರುವುದು ಮಾತ್ರ ಶೋಚನೀಯವಾಗಿದೆ. ಹಸಿವಿನ ನೋವು ಅಥವಾ ವೇದನೆ ಸಾವಿನ ನೋವಿಗಿಂತಲೂ ತೀವ್ರವಾದುದು ಅದಕ್ಕೆಂದೇ ಬೇಂದ್ರೆಯವರು ಅನ್ನದಾನ ಮಹಾಯಜ್ಞ, ಅಣ್ಣಗಳಿರಾ ಅನ್ನದಲ್ಲಿ ಮಣ್ಣ ಕಲಸಬೇಡಿರಿ ಎಂದಿರುವುದು. ಇದುವರೆಗಿನ ಸಂಶೋಧನಾ ಪ್ರಬಂಧಗಳು ಕಥೆ ಕಾದಂಬರಿ ಲೇಖನಗಳಲ್ಲಿನ ಹಲವು ಸಮಸ್ಯೆಗಳ ಚಿತ್ರಣ ನೀಡಿ ಓದುಗರನ್ನು ಎಚ್ಚರಿಸಿದ್ದರೂ ಕೂಡ ಹಸಿವನ್ನು ಒಂದು ಸಮಸ್ಯೆಯಾಗಿ ನೋಡಿದ್ದು ತುಂಬಾ ಕಡಿಮೆ ಮನದ

ಒಡಲು ತುಂಬುವ ಮೊದಲು ದೇಹದ ಒಡಲು ತುಂಬಬೇಕಾದ ಅಗತ್ಯವಿದೆ. ಹಸಿವನ್ನು ಒಂದು ಪರಿಕಲ್ಪನೆಯಾಗಿ ನೋಡಲಾಗಿದೆ. ಪರಿಕಲ್ಪನೆ ಎಂದರೆ ಮನಸ್ಸಿನಲ್ಲಿ ಕಲ್ರಿತವಾದದ್ದು ಆಲೋಚನೆ ಚಿಂತನೆ, ಕಲ್ಪನೆ ಎಂದು ಅರ್ಥವಾಗುತ್ತದೆ ಹಾಗೆಯೇ ಯಾವುದೇ ಒಂದು ವಿಷಯ ಅಥವಾ ಪದದ ಕುರಿತ ತಾತ್ವಿಕ ರೂಪುರೇಷೆ. ಹಸಿವು ಮತ್ತು ಬಡತನವು ಕಲಿಸುವ ಪಾಠವನ್ನು ಬೇರೆ ಯಾವ ವಿಶ್ವ ವಿದ್ಯಾಲಯವೂ ಕಲಿಸುವುದಿಲ್ಲ ಹೊಟ್ಟೆಗಿಲ್ಲದೆ ಹಿಟ್ಟು ರಟ್ಟೆಗೆಂತ್ಯೆ ಬಲವು ಹಸಿವಿನ ನೋವು ಹೊಟ್ಟೆ ತುಂಬಿದವರಿಗೆ ಗೊತ್ತಾಗದೆ ಇರಲು ಕಾರಣ ಅವರು ಹಸಿವಾಗುವವರೆಗೂ ಕಾಯುವುದಿಲ್ಲ. ಹಸಿವಿನ ವೇದನೆಯನ್ನು ನಿವಾರಿಸಿಕೊಳ್ಳಲು ಹಸಿದವರು ತೆಗೆದುಕೊಳ್ಳುವ ನಕಾರಾತ್ಮ ತೀರ್ಮಾನ ಸಮಾಜವನ್ನು ಎಚ್ಚರಿಸುವಂತದ್ದು ಮತ್ತು ತಲೆತಗ್ಗಿಸುವಂತದ್ದು. ಉತ್ತರಪ್ರದೇಶದ ಪಿಲಿ ಬತ್ನಲ್ಲಿರುವ ರಕ್ಷಿತಾರಣ್ಯಗಳ ಅಂಚಿನಲ್ಲಿ ಫೆಬ್ರವರಿ ೨೦೧೭ ರಿಂದ ಇಚೆಗೆ ಬೆಳಕಿಗೆ ಬಂದಿರುವ ಪ್ರಕರಣ ದೇಶವನ್ನೇ ತಲ್ಲಣಗೊಳಿಸಿದೆ. ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಪರಿಹಾರದ ಆಸೆಗೆ ಹಿರಿಯರ ಒಪ್ಪಿಗೆ ಪಡೆದು ಅವರನ್ನು ಹುಲಿ ಅಥವಾ ಕ್ರೂರ ಮೃಗಗಳ ಬಾಯಿಗೆ ದೂಡುವುದು ನಂತರ ಅಳಿದುಳಿದ ಅವಶೇಷವನ್ನು ಅರಣ್ಯ ಇಲಾಖೆಯ ಮುಂದೆ ಹಿಡಿದು ಪರಿಹಾರವನ್ನು ಪಡೆದು ಹಸಿದ ಹೊಟ್ಟೆಯನ್ನು ತುಂಬಿಸಿಕೊಳ್ಳುವುದು ನಿಜಕ್ಕೂ ಕರುಣಾಜನಕವಾದ ಪ್ರಸಂಗವಾಗಿದೆ. ಅಲ್ಲದೆ ಗ್ರೀಸ್ ನಲ್ಲಿ ಮುಖ್ಯ ತಿನಿಸು ಸ್ಯಾಂಡ್ವಿಚ್, ಅದರ ಬೆಲೆ ನೂರಾ ನಲವತ್ತು ಆರ್ಥಿಕ ಪರಿಸ್ಥಿತಿ ಹದಗೆಟ್ಟ ಸಂದರ್ಭದಲ್ಲಿ ಅಲ್ಲಿನ ಮಹಿಳೆಯರು ಹಸಿವನ್ನು ನೀಗಿಸುವ ಒಂದು ಸ್ಯಾಂಡ್ವಿಚ್ ಗಾಗಿ ವೇಶ್ಯಾವಾಟಿಕೆಗೆ ಇಳಿದಿರುವುದು ನಿಜಕ್ಕೂ ನಾಗರಿಕ ಸಮಾಜ ತಲೆತಗ್ಗಿಸುವಂತದ್ದು. ಹಸಿವನ್ನು ಕೇಂದ್ರ ವಸ್ತುವನ್ನಾಗಿಟ್ಟುಕೊಂಡು ಶಿವರಾಮ ಕಾರಂತ, ದೇವನೂರು ಮಹಾದೇವ, ಕುಂ. ವೀರಭದ್ರಪ್ಪ, ಬಿ. ಟಿ ಲಲಿತಾ ನಾಯಕ್, ಸಾರಾ ಅಬೂಬಕರು. ಲಂಕೇಶ್, ನಿರಂಜನ ಮುಂತಾದವರು ಬರೆದಿರುವ ಕಥೆಗಳಲ್ಲಿ ಹಸಿವಿನ ಕರಾಳ ಮುಖವನ್ನು ನೋಡಬಹುದಾಗಿದೆ. ಕುಂ ವೀರಭದ್ರಪ್ಪನವರ 'ಕತ್ತಲನು ತ್ರಿಶೂಲ ಹಿಡಿದ ಕಥೆ'ಯಲ್ಲಿ ಇದು ಸ್ಪಷ್ಟವಾಗುತ್ತದೆ. ಗೌಡರ ಮನೆಯಲ್ಲಿ ತನ್ನ ಜೀವಮಾನದ ಬಹುಕಾಲವನ್ನು ಜೀತದಾಳಾಗಿ ದುಡಿದು ಈಗ ದುಡಿಯುವ ತಾಕತ್ತಿಲ್ಲದ ಕಾರಣ ಹೊರದೂಡಲ್ಪಟ್ಟ ಕತ್ತಲ ಹಲವಾರು ರೀತಿಯಿಂದ ಗೌಡರ ದೌರ್ಜನ್ಯಕ್ಕೆ ಒಳಗಾದವನು. ತನ್ನ ಬೆವರಿನ ಫಲವಾಗಿ ಕಾಳಾಗಿ ನಿಂತ ನಾಲ್ಕು ಜೋಳದ ತೆನೆಗಳನ್ನು ಕದ್ದು ತಂದ ತಪ್ಪಿಗೆ ಹಸಿ ದಂಟಿನಿಂದ ಹೊಡೆತ ತಿಂದವ ಯುಗಾದಿಯ ದಿನ ಊರೆಲ್ಲ ಹಬ್ಬದ ಸಂಭ್ರಮದಲ್ಲಿ ಮುಳುಗಿರುವಾಗ ಭಯಂಕರವಾದ ಹಸಿವಿನ ನೋವಿನಿಂದ ಬಳಲುವ ಕತ್ತಲ ಗೌಡರ ಮನೆಯ ಮುಂದೆ ಎಷ್ಟು ಹೊತ್ತು ನಿಂತರೂ ತುತ್ತು ಅನ್ನ ಸಿಗುವುದಿಲ್ಲ. ಹಳಸಿದ ಅನ್ನವನ್ನು ತಿಪ್ಪೆಗೆ ಎಸೆದ ಗೌಡತಿ. ಬಿಸಿ ಅನ್ನವನ್ನು ನಾಯಿಗೆ ಎಸೆವ ಗೌಡರ ಮಗ ಕತ್ತಲನ ಹಸಿವನ್ನು ಹೆಚ್ಚಿಸುತ್ತಾರೆ. ಪೂಜಾರಿಯನ್ನು ದೂಡಿ ಗುಡಿಯನ್ನು ಪ್ರವೇಶಿಸಿ

ಹೊಟ್ಟೆ ತುಂಬಾ ದೇವರ ಮುಂದಿಟ್ಟ ನೈವೇದ್ಯವನ್ನು ತಿಂದ ತನ್ನನ್ನು ದಂಡಿಸಲು ಹೊರಗೆ ಕೂಡಿದ ಜನರಿಗೆ ತ್ರಿಶೂಲದ ಉತ್ತರ ನೀಡುವ ಕತ್ತಲನ ಪ್ರತಿಭಟನೆಗೆ ಆ ಕ್ಷಣದ ಹಸಿವಿನ ವೇದನೆ ಕಾರಣ. ಮನುಷ್ಯನ ಮೂಲಭೂತ ಅಗತ್ಯತೆಗಳಾದ ಅನ್ನ, ವಸ್ತ್ರ, ವಸತಿಗಳಿಗೆ ಆದ್ಯತೆ ನೀಡಬೇಕು. ದುಡಿಯುವ ಕೈಗೆ ಕೆಲಸ, ಹೊಟ್ಟೆ ತುಂಬಾ ಅನ್ನ ದೇಹವನ್ನು ಮರೆ ಮಾಚಲು ಬಟ್ಟೆ, ಬದುಕಲು ವಸತಿಯ ಆಸರೆ ಸಿಗುವಂತಾದರೆ ಮಾತ್ರ ದೇಶ ಪ್ರಗತಿ ಕಾಣಲು ಸಾಧ್ಯ ಬಡವನ ಹಸಿವನ್ನು ವಿಧವೆಯ ಕಣ್ಣೀರನ್ನು ಒರೆಸುವುದು ಬದುಕಿನ ಆದ್ಯ ಕರ್ತವ್ಯವಾಗಬೇಕು, ಈ ನಿಟ್ಟಿನಲ್ಲಿ ಸರ್ಕಾರ, ಅಧಿಕಾರಿವರ್ಗ ಸಂಘ ಸಂಸ್ಥೆಗಳು, ಮಠ ಮಂದಿರಗಳು ಮನಸ್ಸು ಮಾಡಿದರೆ ಬಡವರ ಹಸಿವಿನ ಕೂಗು ಅಥವಾ ವೇದನೆ ಕೊನೆಯಾದೀತು.

## ಪರಾಮರ್ಶನ ಗ್ರಂಥಗಳು:


1. ಅಭಯಕುಮಾರ್ (ಸಂ.), (2013), ಬೇರು ಬಳ್ಳಿ, ಪ್ರಸಾರಾಂಗ. ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.
2. ಚಂದ್ರಶೇಖರ ಟಿ.ಆರ್., (2014), ಮಾನವ ಅಭಿವೃದ್ಧಿ: ಮಾನವ ಬಡತನ ಮತ್ತು ಮಾನವ ಹಕ್ಕುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಪಕೀರ್ ಮಹಮ್ಮದ್ ಕಟ್ಪಾಡಿ & ಕೃಷ್ಣಮೂರ್ತಿ ಹನೂರು, (2014), ಕನ್ನಡದ ಮೂವತ್ತು ಕಥೆಗಳು, ಸಾಹಿತ್ಯ ಅಕಾಡೆಮಿ, ನವದೆಹಲಿ.
4. ರಾಮಣ್ಣ ಬೆಸಗರಹಳ್ಳಿ, (2015), ಸಮಗ್ರ ಕಥೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ವೀರಭದ್ರಪ್ಪ ಕುಂ., (2010), ಬರಿ ಕಥೆಯಲ್ಲೋ ಅಣ್ಣಾ, ಸಪ್ನ ಬುಕ್ ಹೌಸ್, ಬೆಂಗಳೂರು.
6. ಶಿವರಾಮ ಕಾರಂತ ಕೆ., (2001), ಹಸಿವು, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.
7. ಶಿವರಾಮ ಶೆಟ್ಟಿ ಬಿ., (2017), ಜೇನುಹುಟ್ಟು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.
8. ಸಣ್ಣರಾಮ, (2011), ಸಾಹಿತ್ಯ ಸಂವೇದನೆ–3. ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
9. ಮುರಳೀಧರ್ ಎಚ್.ಎನ್., (15.03.2017), ಕಡಲು, ವಿಜಯವಾಣಿ.
10. ಪ್ರಜಾವಾಣಿ, ಸಂಪಾದಕೀಯ, 16. 07. 2014
11. ಪ್ರಜಾವಾಣಿ, ತನುವಿನೊಳಗನುದಿನವಿದ್ದು, 13. 07. 2014
12. ವಿಜಯವಾಣಿ. 15. 03. 2017.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.